
ನಾಂದಿಪದ

# ಮಾನವೀಯ ಕಣ್ಣುಗಳು




ವಿಮರ್ಶಕ ಜಿ. ರಾಜಶೇಖರ ಇತ್ತೀಚೆಗೆ ಉಡುಪಿಯಲ್ಲಿ ತೀರಿಕೊಂಡರು. ಕೋಮುವಾದದ ವಿರುದ್ಧ ನಿರಂತರವಾಗಿ ಚಿಂತಿಸುತ್ತಿದ್ದ ಅವರು, ಕೋಮುವಾದ ಮತ್ತು ಮನುಷ್ಯನ ಹಿಂಸೆಯ ಕುರಿತಂತೆ ಸೂಕ್ಷ್ಮ ಒಳನೋಟಗಳಿಂದ ಮಾತನಾಡಬಲ್ಲವರಾಗಿದ್ದರು ಹಾಗೂ ಬರೆಯಬಲ್ಲವರಾಗಿದ್ದರು. ಅವರ ಮಾತು–ಬರಹಗಳಲ್ಲಿ ವೈಚಾರಿಕ ಗಟ್ಟಿತನವಿತ್ತು. ಅವುಗಳ ಮೂಲಕ ಸಹೃದಯರಿಗೆ ಅವರು ಜಗತ್ತನ್ನು ನೋಡುವ ಮಾನವೀಯ ಕಣ್ಣುಗಳನ್ನು ನೀಡುತ್ತಿದ್ದರು. ಅವರೊಬ್ಬ ಪ್ರಥಮದರ್ಜೆಯ ಸಾಹಿತ್ಯ ವಿಮರ್ಶಕರೂ ಆಗಿದ್ದರು. ತರುಣ ಸಾಹಿತಿಗಳಿಗೆ ಅವರ ವಿಮರ್ಶೆಗಳಲ್ಲಿ ಹಲವು ಪಾಠಗಳಿವೆ. ಏಕಕಾಲಕ್ಕೆ ಅವರು ಸಾಮಾಜಿಕ ಚಿಂತಕ ಹಾಗೂ ಸಾಹಿತ್ಯ ವಿಮರ್ಶಕ. ಈ ಎರಡೂ ಅಂಶಗಳು ಒಬ್ಬರಲ್ಲೇ ಕಾಣಸಿಗುವುದು ಅಪರೂಪ. ಚಿಂತನೆ ಹಾಗೂ ವಿಮರ್ಶೆ ಎರಡನ್ನೂ ಜಡಗೊಳ್ಳಲು ಬಿಡದೆ, ಆರ್ದ್ರತೆಯನ್ನು ಉಳಿಸಿಕೊಂಡಿದ್ದು ಅವರ ಬಹುದೊಡ್ಡ ಸಾಧನೆ. ಈ ಸಂಚಿಕೆಯಲ್ಲಿ ರಾಜಶೇಖರರ ಕುರಿತಂತೆ ಅವರ ಒಡನಾಡಿಗಳಾದ ರಘುನಂದನ ಹಾಗೂ ಕೆ. ಫಣಿರಾಜ್ ಅವರು ಬರೆದ ಸ್ಮೃತಿಚಿತ್ರಗಳಿವೆ. ಅವು ರಾಜಶೇಖರರ ಮಾನವೀಯ ವ್ಯಕ್ತಿತ್ವದ ಹಲವು ಮಗ್ಗಲುಗಳನ್ನು ಸ್ಪರ್ಶಿಸಿವೆ.

ಕನ್ನಡ ಸಾಂಸ್ಕೃತಿಕ ಲೋಕದ ಪ್ರಮುಖ ವ್ಯಕ್ತಿ, ನಾಟಕಕಾರ ಗಿರೀಶ ಕಾರ್ನಾಡರ ಜೊತೆಗಿನ ಆತ್ಮೀಯ ಒಡನಾಟವನ್ನು ಚಿತ್ರಿಸುವ ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಲೇಖನ 'ಗಿರೀಶ ಕಾರ್ನಾಡ: ಕೆಲವು ಕಪ್ಪು–ಬಿಳುಪು ಚಿತ್ರಗಳು' ಈ ಸಂಚಿಕೆಯ ಮತ್ತೊಂದು ವಿಶೇಷ. ಈ ಲೇಖನ ನಮ್ಮ ಕಾಲದ ಧೀಮಂತನೊಬ್ಬನ ಪ್ರತಿಭಾ ವಿಲಾಸವನ್ನು, ಅಸಾಧಾರಣ–ಸುಸಂಸ್ಕೃತ ವ್ಯಕ್ತಿತ್ವವನ್ನು ಕಣ್ಣಮುಂದೆ ತರುತ್ತದೆ.

ಕ್ವೀರ್ ಸಮುದಾಯಕ್ಕೆ ಸೇರಿದ ಪ್ರತಿಭಾವಂತ ಬರಹಗಾರ್ತಿ–ಕಲಾವಿದೆ ಶಿಲೋಕ್ ಮುಕ್ಕಾಟಿ ಅವರ ಸಂದರ್ಶನ ಸಂಚಿಕೆಯ ಚೆಲುವು ಮತ್ತು ಅರ್ಥ ಸಾಧ್ಯತೆಗಳನ್ನು ಹೆಚ್ಚಿಸಿರುವ ಮತ್ತೊಂದು ಬರಹ.

ಹೊಸ ಭಾವ–ಬಣ್ಣಗಳ ಆಗಸ್ಟ್ ಸಂಚಿಕೆಗೆ ಓದುಗರಿಂದ ಬೆಚ್ಚನೆ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಸಂಚಿಕೆಗೆ ಓದುಗರು ನೀಡಿದ ಚೈತನ್ಯದಾಯಕ ಪ್ರತಿಕ್ರಿಯೆಗಳು ನಮಗೆ ಹುರುಪು ನೀಡುವಂತಿವೆ. ಇವು ನಮ್ಮನ್ನು ನಮ್ರರನ್ನಾಗಿಸಿವೆ, ಹೆಚ್ಚಿನ ಉತ್ಸಾಹವನ್ನು ನೀಡಿವೆ. ಆ ಪ್ರಯೋಗಶೀಲತೆಯ ಭಾಗವಾಗಿಯೇ ಕವಿಗಳು ಕೈ ಬದಲಿಸಿಕೊಂಡು ಕಾವ್ಯ ರೂಪಕದ ಹುಡುಕಾಟ ನಡೆಸುವ 'ಕಾವ್ಯ ಜೂಟಾಟ' ಮಾಲಿಕೆ ಈ ಸಂಚಿಕೆಯಿಂದ ಶುರುವಾಗಿದೆ. ಇದರೊಂದಿಗೆ ಹೊಸ ವಸ್ತು–ಧಾಟಿಯ ಕತೆ, ಪ್ರಬಂಧಗಳು ನಿಮಗೆ ಪ್ರಿಯವಾಗಬಹುದು ಎಂಬುದು ನಮ್ಮ ಭಾವನೆ.

**ಮಯೂರ ಬಳಗ**



ಕಲೆ: ಸೌಮ್ಯಪ್ರಭು ಕಲ್ಯಾಣ್ಕರ್